ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**33/2025**

ಸಾಕ್ಷಿದಾರರ ಹೆಸರು ಃ ಪ್ರಶಾಂತ್ ಎಸ್ ಸಿ.ಡಬ್ಲ್ಯೂ - 07
ತಂದೆಯ ಹೆಸರು ಃ ಶಿವಸ್ವಾಮಿ ಎಸ್ ಪಿ.ಡಬ್ಲ್ಯೂ -02
ವಯಸ್ಸು ಃ 46 ವರ್ಷ
ಉದ್ಯೋಗ ಃ ಆಟೋ ಚಾಲಕ
ವಾಸಸ್ಥಳ ಃ ಭವಾನಿ ಶಂಕರ ರಸ್ತೆ, ಅಗ್ರಹಾರ.

ದಿನಾಂಕಃ **09/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ದಿಃ 26/06/2022 ರಂದು ಮ.12.30 ರಿಂದ 1.30 ರ ಅವಧಿಯಲ್ಲಿ ಎನ್ ಆರ್ ಪುರ ಅಗ್ರಹಾರದ ಶಂಕರಯ್ಯ ಮನೆ ಎದುರಿನ ರಸ್ತೆಯಲ್ಲಿ ಅಪಘಾತದ ಹಿನ್ನಲೆಯಲ್ಲಿ ಪೊಲೀಸರು ಕೃತ್ಯ ಸ್ಥಳದ ಮಹಜರಿಗೆ ಬಂದಿದ್ದು ಆ ಕಾಲಕ್ಕೆ ಸದರಿ ಸ್ಥಳವನ್ನು ಗುರುಮೂರ್ತಿ ಚಾಸಾ 12 ರವರು ತೋರಿಸಿದ್ದು ಸದರಿಯವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 2 ರವರ ಸಮಕ್ಷಮ ಪೊಲೀಸರು ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿ, ಆ ಕಾಲಕ್ಕೆ ಕೃತ್ಯ ಸ್ಥಳದ ಭಾವಚಿತ್ರವನ್ನು ತೆಗೆದಿರುತ್ತಾರೆ.

2. ಸಾಕ್ಷಿಯು ತಮ್ಮ ಸಮಕ್ಷಮ ಮಾಡಿದ ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯ್ತು. ನಿಪಿ 3 ಅನ್ನು ಮಾಡುವ ಕಾಲಕ್ಕೆ ತೆಗೆದ 3 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 6 ಎಂದು ಹಾಗೂ ಒಂದು ಸಿ ಡಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯ್ತು.

ಪಾಟೀ ಸವಾಲುಃ **2** ಮತ್ತು **3** ನೇ ಆರೋಪಿತರ ಪರ ಶ್ರೀ ಜಿ ಡಿ ವಕೀಲರಿಂದಃ

ಚಾಸಾ 1 ರವರು ನನಗೆ ದೂರದ ಸಂಬಂಧಿಕರು ಇರುತ್ತಾರೆ. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಚಾಸಾ 1 ರವರು ಕರೆದುಕೊಂಡು ಬಂದಿರುತ್ತಾರೆ. ನನ್ನ ಆಟೋದಲ್ಲಿಯೇ ಈ ದಿನ ನಾನು ಮತ್ತು ಚಾಸಾ 1 ರವರು ನ್ಯಾಯಾಲಯಕ್ಕೆ ಬಂದಿರುತ್ತೇವೆ ಸಾಕ್ಷಿ ಮುಂದುವರಿದು ಬಾಡಿಗೆ ಕೊಡುತ್ತೇವೆ ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಪೊಲೀಸರು ಮಹಜರಿಗೆ ಬರುವಂತೆ ಕರೆದಿದ್ದು ಆದರೆ ನೋಟೀಸು ಕೊಟ್ಟಿರುವುದಿಲ್ಲ. ನನಗೆ ಸ್ಥಳಕ್ಕೆ 12.30 ಕ್ಕೆ ಬರುವಂತೆ

ಪೊಲೀಸರು ಹೇಳಿದ್ದು ಆದರೆ ಅವರ ಹೆಸರು ಗೊತ್ತಿರುವುದಿಲ್ಲ. ಮಹಜರಿನಲ್ಲಿ ಏನು ಬರೆದಿರುತ್ತಾರೆಂದು ನನಗೆ ಈಗ ಹೇಳಲು ಆಗುವುದಿಲ್ಲ. ಕೃತ್ಯ ಸ್ಥಳದಲ್ಲಿ ಅಪಘಾತಕ್ಕೆ ಒಳಗಾದ ವಾಹನಗಳ ಬಗ್ಗೆ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ.

2. ಪೊಲೀಸರು ಸ್ಥಳ ಪರಿಶೀಲನೆ ಮಾಡುವ ಕಾಲಕ್ಕೆ ಅಳತೆ ಮಾಡಿದ್ದು, ಆದರೆ ಅಳತೆಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಮಹಜರಿನಲ್ಲಿ ವಾಹನದ ಸಂಖ್ಯೆಯನ್ನು ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಮಹಜರಿನಲ್ಲಿ ಆರೋಪಿಯ ಹೆಸರನ್ನು ಹೇಳಿದ್ದು ಆದರೆ ನನಗೆ ನೆನಪಿರುವುದಿಲ್ಲ. ಮಹಜರಿನಲ್ಲಿ ಚಕ್ಕುಬಂದಿಯನ್ನು ಪೊಲೀಸ್ ಠಾಣೆಯ ಯಾವ ದಿಕ್ಕಿಗೆ ಬರುತ್ತದೆ ಎಂದು ಬರೆದಿರುತ್ತಾರೆ. ಮಹಜರು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಮಹಜರಿಗೆ 3 ಜನ ಸಹಿ ಹಾಕಿರುತ್ತೇವೆ. ನನಗೆ ಕೇಸಿನ ಬಗ್ಗೆ ಏನು ಗೊತ್ತಿರುವುದಿಲ್ಲ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 1 ರವರು ಸಂಬಂಧಿಕರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಮಹಜರಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರು ಆರೋಪಿ 2 ಮತ್ತು 3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.</u>

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ